3) ಬೀದಿ ದೀಪ ನಿರ್ವಹಣೆಯ ವಿಭಾಗದಲ್ಲಿ ಪ್ರಸ್ತುತ ಎಷ್ಟು ಮಂದಿಗೆ ಕಾಂಟ್ರೆಕ್ಟ್ ನೀಡಲಾಗಿದೆ? ಪ್ರತಿ ಕಾಂಟ್ರಾಕ್ಟ್‌ರವರ ಕೈ ಕೆಳಗೆ ಎಷ್ಟು ಮಂದಿ ಕಾರ್ಮಿಕರ ದುಡಿಯುತ್ತಿದ್ದಾರೆ?

4) ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾಂಟ್ರೆಕ್ಟ್ ಲೇಬರ್ ಪದ್ಧತಿಯನ್ನು ನಿಗಧಿಸಲಾಗಿದೆಯೇ?

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ ಪೌರಾಡಳಿತ ರಾಜ್ಯ ಸಚಿವರು.

1) ವಿದ್ಯುತಾ ವಿಭಾಗದಲ್ಲಿ ಇರುವ ಖಾಯಂ ನೌಕರರು - 16,

2) ಬದಲಿ ಕಾರ್ಮಿಕರು - ಇಲ್ಲ

3) ದಿನ ಗೂಲಿ ನೌಕರರು - ಇಲ್ಲ

2) ಈ ಮಹಾನಗರ ಪಾಲಿಕೆಯಲ್ಲಿ ದಾರಿ ದೀಪ ನಿರ್ವಹಣೆಯ ಕಾಮಗಾರಿಯನ್ನು ವರ್ಷಂಪ್ರತಿ ಟೆಂಡರು ಕರೆದುಗುತ್ತಿಗೆ ಅಧಾರದಲ್ಲಿ ನಿರ್ವಹಿಸಲಾಗುತ್ತಿದೆ.

3) ಬೀದಿ ದೀಪ ನಿರ್ವಹಣೆಯ ವಿಭಾಗದಲ್ಲಿ ಪ್ರಸ್ತುತ 3 ಮಂದಿ ವಿದ್ಯುತ್ ಗುತ್ತಿಗೆದಾರರು ಇದ್ದಾರೆ ಪ್ರತಿ ಗುತ್ತಿಗೆದಾರರ ಕೈ ಕೆಳಗೆ 9 (ಒಂಬತ್ತು) ರಂತೆ ಕಾರ್ಮಿಕರು ದುಡಿಯುತ್ತಿದ್ದಾರೆ.

4) ಹೌದು

ಅಧ್ಯಕ್ಷರು:- ಉತ್ತರಗಳನ್ನು ಮಂಡಿಸಲಾಯಿತು.

ಚುನಾವಣಾ ಪ್ರಸ್ತಾವ 2

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು):- ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಶಾಸನದ ರೀತ್ಯಾ 21-1-14ನೇ ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕಲಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗನುಸಾರವಾಗಿ ಈ ಸಭೆಯು ಕುವೆಂಪು ವಿಶ್ವವಿದ್ಯಾನಿಲಯದ ಸೆನೆಟ್‌ಗೆ ಒಬ್ಬ ಸದಸ್ಯರನ್ನು ಚುನಾಯಿಸಬೇಕು ಎಂದು ಸೂಚಿಸಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- (ಮಾನ್ಯ ವಿರೋಧಪಕ್ಷದ ನಾಯಕರು):- ಸನ್ಮಾನ್ಯ ಅಧ್ಯಕ್ಷರೆ ತಮ್ಮ ಅಪ್ಪಣೆಯನ್ನು ಆ ಪಡೆದು.

ಅಧ್ಯಕ್ಷರು:- ಇಲ್ಲ I have withheld my consent for raising the matter. That matter was raised in the House yesterday and it doesn't constiute a fit matter to be raised under Rule 60. S0, I have withheld my consent.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಆದ್ದರಿಂದಲೇ ನಾನು ತಮಗೆ ಮನವರಿಕೆ ಮಾಡಿಕೊಡಲು ನಿಂತಿದ್ದೇನೆ.